ಚರಿತ್ರೆ



# ಬಳ್ಳಾರಿಯ ಕಲಾತ್ಮಕ ಅವ್ವಮ್ಮ ಬಾವಿ

■ **ದಸ್ತಗೀರಸಾಬ್ ದಿನ್ನಿ**

ಹದಿನಾರನೆ ಶತಮಾನದಲ್ಲಿ ಬರುವ ಬಳ್ಳಾರಿಯ ಪಾಳೆಗಾರರಲ್ಲಿ ಹಂಡೆ ಹನುಮಪ್ಪ ನಾಯಕರದು ದೊಡ್ಡ ಹೆಸರು. ಬಿಸಿಲೂರ ಜನರಿಗೆ ನೀರಿನ ಸಮಸ್ಯೆ ಉದ್ಭವವಾಗಬಾರದು ಎನ್ನುವ ದೂರದೃಷ್ಟಿಯಿಂದ ತಮ್ಮ ಸಹೋದರಿಯರಾದ ಅಕ್ಕಮ್ಮ, ಅವ್ವಮ್ಮ ಮತ್ತು ನೀಲಮ್ಮರ ಹೆಸರಿನಲ್ಲಿ ಬಳ್ಳಾರಿಯಲ್ಲಿ ದೊಡ್ಡ ದೊಡ್ಡ ಬಾವಿಗಳನ್ನು ಕಟ್ಟಿಸಿದ್ದಾರೆ. ಅಕ್ಕತಂಗಿಯರ ಬಾವಿಗಳು ಎಂದು ಕರೆಸಿಕೊಳ್ಳುತ್ತಿರುವ ಅವುಗಳಲ್ಲಿ ಅವ್ವಮ್ಮ ಬಾವಿ ತುಂಬಾ ಹೆಸರುವಾಸಿಯಾಗಿದೆ.

ರಾಯಚೂರಿನಿಂದ ಬಂದ ನಾನು ಬಳ್ಳಾರಿಯ ಅದೇ ನಗರದಲ್ಲಿದ್ದರೂ ಬಾವಿಯನ್ನು ನೋಡಲಾಗಿರಲಿಲ್ಲ. ಪುರಾತನ ಬಾವಿ ನೋಡುವ ಬಹುದಿನಗಳ ಆಸೆ ಇತ್ತೀಚೆಗೆ ಮಿತ್ರರೊಬ್ಬರೊಂದಿಗೆ ಸಾಧ್ಯವಾಯಿತು.

ಸಿರುಗುಪ್ಪ ಮುಖ್ಯರಸ್ತೆಯಲ್ಲಿರುವ ಅವ್ವಮ್ಮ (ಹವಂಬಾವಿ) ಬಾವಿಯ ರಚನಾ ವಿನ್ಯಾಸ ತುಂಬಾ ವಿಶಿಷ್ಟ ಮತ್ತು ಕಲಾತ್ಮಕವಾಗಿದೆ. ನೋಡುಗರನ್ನು ಮತ್ತೆ ಮತ್ತೆ ಆಕರ್ಷಕವಾಗಿ ಸೆಳೆಯುವ ಇದು ಬಳ್ಳಾರಿ ಬೆಟ್ಟಕ್ಕೆ ಅಭಿಮುಖವಾಗಿ ತೆರೆದುಕೊಂಡಿದೆ. ಸಾಲು ಸಾಲು ಮೆಟ್ಟಿಲುಗಳು, ಬೃಹದಾಕಾರದ ಕಂಬಗಳು, ನಾಲ್ಕು ದಿಕ್ಕುಗಳಿಗೂ ಜೋಡಿಸಿಟ್ಟ ಕಲ್ಲುಗಳು, ತೊಲೆಗಳು, ಸುಂದರವಾದ ಕಮಾನುಗಳು, ಕಲ್ಲಿನ ಕೆತ್ತನೆಯ ಕುಸುರಿ ಕೆಲಸವನ್ನು ನೋಡಿದರೆ ವಾಸ್ತುಶಿಲ್ಪದ ದೃಷ್ಟಿಯಿಂದ ವಿಜಯನಗರ ಶೈಲಿಯನ್ನು ನೆನಪಿಸುವಂತಿದೆ.

ಬೆಟ್ಟದ ಪಶ್ಚಿಮ ಭಾಗದಲ್ಲಿದ್ದ ಸೈನಿಕರು ಈ ನೀರನ್ನು ಬಳಸುತ್ತಿದ್ದರಂತೆ. ಒಂದು ಕಾಲದಲ್ಲಿ ಇಲ್ಲಿನ ಶುದ್ಧ ನೀರು ಕುಡಿಯುವ ನೀರಿನ ಬವಣೆಯನ್ನು ನೀಗಿಸುತ್ತಿತ್ತು. ಆ ಕಾರಣಕ್ಕಾಗಿ ಈ ಬಾವಿ ತುಂಬಾ ಉಪಯುಕ್ತವಾಗಿತ್ತು ಎಂದು ಹಿರಿಯರು ಹೇಳುತ್ತಾರೆ. ಪುಷ್ಕರಣಿಯನ್ನು ನೆನಪಿಸುವಂತೆ ರಚನೆಯಾಗಿರುವುದು ಇದರ ವಿಶೇಷ.

ಈ ಬಾವಿ ಸುಮಾರು 100 ಅಡಿ ಉದ್ದ ಮತ್ತು 80 ಅಡಿ ಅಗಲವಿದೆ. ಸುತ್ತಲೂ ಅಂಕಣಗಳಿವೆ. ಪ್ರವೇಶ ದ್ವಾರದಿಂದ ಇಳಿದು ಬಲಕ್ಕೆ ತಿರುಗಿದರೆ 60ಕ್ಕೂ ಹೆಚ್ಚು ವಿಸ್ತಾರವಾದ ಮೆಟ್ಟಿಲುಗಳಿವೆ. ಪ್ರವೇಶ ದ್ವಾರದ ಪಕ್ಕದಿಂದ ಹಾದು ಒಳ ಬಂದರೆ ದೊಡ್ಡ ದೊಡ್ಡ ಹಾಸುಗಲ್ಲುಗಳು ಕಾಣಸಿಗುತ್ತವೆ. ಒಳಗಿನ ಗೋಡೆಗಳಿಗೆ ಸುತ್ತಲೂ ಜೋಡಿಸಿಟ್ಟ ಕಲ್ಲುಗಳು ಶಿಲ್ಪಿಗಳಿಗೆ ಮೇಣದಂತೆ ಕರಗಿ ಮಾತನಾಡಿವೆ ಏನೋ ಎನ್ನುವಂತಿದೆ. ಅಲ್ಲಲ್ಲಿ ಮತ್ಸ್ಯ, ಕೂರ್ಮ, ನಾಗಗಳ ಉಬ್ಬುಚಿತ್ರಗಳ ಸಂಕೀರ್ಣವಾದ ಕೆತ್ತನೆಗಳು ಶಿಲ್ಪಿಗಳ ಕೌಶಲಕ್ಕೆ ಸಾಕ್ಷಿಯಂತಿದ್ದು, ಮನಮೋಹಕವಾಗಿವೆ. ವಾಸ್ತುಶಿಲ್ಪದ ನಾವೀನ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಹಂಡೆ ಪಾಳೆಯಗಾರರಿಗಿದ್ದ ಸೌಂದರ್ಯಪ್ರಜ್ಞೆ, ಕಲೆಗಾರರ ಬಗೆಗಿನ ಪ್ರೀತಿ ಮನದಟ್ಟಾಗುತ್ತದೆ.

ಅವ್ವಮ್ಮ ಬಾವಿಯ ಅಂತರ್ಜಲ ಸದ್ಯ ಕುಸಿದಿದೆ. ತನ್ನ ಗತವೈಭವವನ್ನು ಮೆರೆದು ಬಳಸುವವರಿಲ್ಲದೆ ಬಿಕೋ ಎನ್ನುತ್ತಿದೆ. ಜನ ಆಗಾಗ ಬಂದು ಗಂಗೆ ಪೂಜೆ ಸಲ್ಲಿಸುತ್ತಾರೆ. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನೋಡುವಂತಾಗಲು ಕಾರಂಜಿ, ಬಣ್ಣದ ಬೆಳಕಿನ ವ್ಯವಸ್ಥೆ ಮಾಡಿ ಅದರ ಸೌಂದರ್ಯವನ್ನು ಹೆಚ್ಚಿಸಬೇಕು. ಬಾವಿಯ ಹೂಳನ್ನು ಸ್ವಚ್ಛಗೊಳಿಸಿ ನೀರಿನ ಬಳಕೆಗೆ ಅವಕಾಶ ಮಾಡಿಕೊಟ್ಟರೆ ಬೇಸಿಗೆಯಲ್ಲೂ ನೀರಿನ ದಾಹ ತಪ್ಪಿಸಬಹುದು. ■

